**ಓ.ಎಸ್ ನಂ. 111 /2021** **ಪಿ.ಡಬ್ಲ್ಯೂ-1 (ನಾಗೇಶ್)**

**ಸಾಕ್ಷಿಯನ್ನು ದಿನಾಂಕಃ 06.11.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 4 ಮತ್ತು 5 ರವರ ಪರ ವಕೀಲರಾದ ಶ್ರೀ ಪಿ ಎನ್ ಜಿ. ವಕೀಲರಿಂದಃ**

ಪ್ರಸ್ತುತ ದಾವೆಯ ಎಲ್ಲಾ ಮಾಹಿತಿಯನ್ನು ನಾನು ತಿಳಿದುಕೊಂಡಿರುತ್ತೇನೆ. ನನ್ನ ತಾಯಿ ದೇವಮಣಿ ರವರಿಗೆ ಯಾವ ಆರೋಗ್ಯದ ಸಮಸ್ಯೆ ಇದೆ ಎಂದು ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ನನ್ನ ತಾಯಿಯವರ ಜಿ ಪಿ ಎ ನಲ್ಲಿ ಅವರಿಗೆ ಯಾವ ಯಾವ ಆರೋಗ್ಯದ ಸಮಸ್ಯೆ ಇದೆ ಎಂದು ಹೇಳಲಾಗಿರುತ್ತದೆಯೋ ಅದಕ್ಕೆ ಸಂಬಂದಿಸಿದಂತೆ ಯಾವುದೇ ದಾಖಲಾತಿಯನ್ನು ಹಾಜರುಪಡಿಸಿದೆ ಸುಳ್ಳು ಜಿ ಪಿ ಎ ಯನ್ನು ಹಾಜರುಪಡಿರುತ್ತೇನೆ ಎಂದರೆ ಸರಿಯಲ್ಲ..

ನಮ್ಮ ತಾಯಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯ ಹೊರಬರುತ್ತದೆ ಎಂದು ಅವರ ಪರವಾಗಿ ಬಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ತಮ್ಮ ತಕರಾರಿನಲ್ಲಿ ಏನು ತಿಳಿಸಿರುತ್ತಾರೆ ಎಂಬ ಬಗ್ಗೆ ನಾನು ತಿಳಿದಿರುತ್ತೇನೆ. ದಾವಾಸ್ತಿಗೆ ಸಂಬಂದಿಸಿದಂತೆ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೆನೆ.

ನಮ್ಮ ತಾತ ಮುದ್ದುಮಾದಪ್ಪ ನವರು ಸು. 30 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಮ್ಮ ತಾತನವರು ಮರಣ ಹೊಂದುವ ಪೂರ್ವದಲ್ಲಿ ವಿವಾಹ ವಾಗಿರುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಮ್ಮ ತಾಯಿಯವರು ವಿವಾಹವಾಗುವ ಪೂರ್ವದಲ್ಲಿ 1 ನೇ ಪ್ರತಿವಾದಿಯಾ ಗಂಡ

ನಾಗರಾಜ ಸ್ವಾಮಿ ಮತ್ತು 4 ನೇ ಪ್ರತಿವಾದಿ ಪುಟ್ಟ ಸ್ವಾಮಿ ರವರಿಗೆ ಮದುವೆ ಆಗಿರುತ್ತದೆಯೇ ಎಂದರೆ ಸಾಕ್ಷಿಯು ಅದು ನನಗೆ ಸರಿಯಾಗಿ ತಿಳಿದಿರುವುದಿಲ್ಲ ಎಂದು ನುಡಿಯುತ್ತಾರೆ. ನಮ್ಮ ಪೂರ್ವದಲ್ಲಿ ನಮ್ಮ ತಾಯಿಯವರದೇ ಮೊದಲಿಗೆ ಮದುವೆಯಾಗಿರುತ್ತದೆ ಎಂದರೆ ನನ್ನ ಮಾವನವರಾದ ನಾಗರಾಜ ಸ್ವಾಮಿಯವರಿಗೆ ಮದುವೆಯಾಗಿರುತ್ತದೆ ಎಂದು ನುಡಿಯುತ್ತಾರೆ. ನಮ್ಮ ತಾಯಿಯವರು ಮದುವೆಯಾಗಿ ಸು.46 ವರ್ಷಗಳಾಗಿರುತ್ತವೆ. ನಮ್ಮ ತಾಯಿಯವರು ವಿವಾಹ ವಾದ ನಂತರ ನಮ್ಮ ತಂದೆ ಮನೆಯಲ್ಲಿಯೇ ಅಂದರೆ ಬಸಾಪುರದಲ್ಲಿಯೇ ವಾಸವಾಗಿದ್ದರು ಎಂದರೆ ಸಾಕ್ಷಿಯು ನನ್ನ ತಂದೆ ಮನೆಯಲ್ಲಿ ವಾಸಗಿದ್ದರು ಮತ್ತು ತವರು ಮನೆಗೆ ಹೋಗಿ ಬಂದು ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ನಮ್ಮ ತಾಯಿಯವರ ಮದುವೆಯನ್ನು ನಮ್ಮ ತಾತ ನವರಾದ ಮುದ್ದು ಮಾದಪ್ಪ ಮತ್ತು ನನ್ನ ಮಾವಂದಿರು ಸೇರಿ ಮದುವೆ ಮಾಡಿಸಿರುತ್ತಾರೆ ಎಂದರೆ ಸರಿ. ನಮ್ಮ ತಾಯಿಯವರ ಮದುವೆಯ ಸಂದರ್ಬದಲ್ಲಿ ಒಡವೆ, ವಸ್ತ್ರ, ವರೋಪಚಾರ ನೀಡಿ ಮದುವೆ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳು ಯಾವ ರೀತಿಯಾಗಿ ಬಂದಿರುತ್ತವೆ ಎಂದು ವಾದ ಪತ್ರದಲ್ಲಿ ಹೇಳಲಾಗಿರುತ್ತದೆ. 1 ನೇ ಪ್ರತಿವಾದಿ ರವರ ಯಜಮಾನರಾದ ನಾಗರಾಜ ಸ್ವಾಮಿ ರವರು ಅವರ ಜೀವಿತ ಅವಧಿಯಲ್ಲಿ ಬ್ಯಾಂಕ್ ನಲ್ಲಿ ಕ್ಲರ್ಕ್ ಆಗಿ ಕೆಲಸ ನಿರ್ವಹಿಸಿದ್ದರು ಎಂದರೆ ಸರಿ. ದಾವಾ ಸ್ವತ್ತುಗಳು ನನ್ನ ತಾತನವರ ಪಿತ್ರಾರ್ಜಿತ ಆಸ್ತಿ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ಸಾಕ್ಷಿಗೆ ನಿಮ್ಮ ತಾಯಿಯವರು ನಿಮಗೆ ತಿಳಿದಿರುವ ಹಾಗೇ ಅವರ ಸಹಿಯನ್ನು ಹಾಕುತ್ತಾರೆಯೇ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೋ ಎಂದರೇ ಸಾಕ್ಷಿಯು ನನ್ನ ತಾಯಿಯವರು ಹೆಬ್ಬೆಟ್ಟಿನ ಗುರುತನ್ನು ಹಾಕುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಾಯಿಯವರು ಸಹಿಯನ್ನು

ಮಾಡುತ್ತಿದ್ದರೂ ಸಹ ಅವರು ಹೆಬ್ಬೆಟ್ಟಿನ ಗುರುತನ್ನು ಮಾಡುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವಾ ಎ ಶೆಡ್ಯೂಲ್ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನನಗೆ ತಿಳಿದಿರುತ್ತದೆ ಅದು ಈಗ ಪ್ರತಿವಾದಿ 4 ಪುಟ್ಟ ಸ್ವಾಮಿ ರವರ ಹೆಸರಿನಲ್ಲಿದೆ. ಸದರಿ ಸ್ವತ್ತು ಕಪ್ಪಸೋಗೆ ಗ್ರಾಮದ ಚಿಕ್ಕನಾಯಕ ರವರ ಹೆಸರಿನಲ್ಲಿತ್ತು ಅದನ್ನು ಅವರು 1 ನೇ ಪ್ರತಿವಾದಿ ಗಂಡ

ನಾಗರಾಜ ಸ್ವಾಮಿ ರವರಿಗೆ 1992 ರಲ್ಲಿ ಕ್ರಯಕ್ಕೆ ನೀಡಿರುತ್ತಾರೆ ಎಂದರೆ ಸರಿ, ಸಾಕ್ಷಿಯು ಮುಂದುವರಿದು ಅದನ್ನು ಒಟ್ಟು ಕುಟುಂಬದ ಅದಾಯದಿಂದ ಖರೀದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ಸ್ವತ್ತನ್ನು ನಾಗರಾಜ ಸ್ವಾಮಿ ರವರು ಒಟ್ಟು ಕುಟುಬಂದ ಆದಾಯದಿಂದ ಖರೀದಿಸಿರುತ್ತಾರೆ ಎಂದು ತೋರಿಸಲು ದಾಖಲಾತಿಗಳನ್ನು ನ್ಯಾಯಾಲಯಕ್ಕ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಎಲ್ಲಾ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಸದರಿ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿರುತ್ತದೆ ಎಂದು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ. ಎ ಸ್ವತ್ತು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಲಾಗಿರುತ್ತದೆ ಎಂದು ಹೇಳಿ ವಾದ ಪತ್ರದಲ್ಲಿ ಬರೆಸಿರುವುದಿಲ್ಲ. ಪ್ರತಿವಾದಿ 1 ರವರ ಗಂಡನಾದ ನಾಗರಾಜ ಸ್ವಾಮಿ ರವರು ಸದರಿ ಸ್ವತ್ತನ್ನು ಪ್ರತಿವಾದಿ 4 ರವರಿಗೆ ದಿಃ 14.09.2016 ರಂದು ದಾನ ಪತ್ರದ ಮೂಲಕ ಅವರಿಗೆ ನೀಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಸದರಿ ದಾನ ಪತ್ರದಂತೆ ಪ್ರತಿವಾದಿ 4 ರವರ ಹೆಸರಿಗೆ ಎಂ ಆರ್ ಹೆಚ್ 29/2016-17 ರಂತೆ ಖಾತೆಯಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಅವರೇ ಹಾಜರುಪಡಿಸಿದಂತಹ ನಿಪಿ 20 ಅನ್ನು ತೋರಿಸಲಾಗಿ ಅದರಲ್ಲಿ ಮೇಲೆ ಹೇಳಿದ ಎಂ ಆರ್ ನಂತೆ ಖಾತೆಯಾಗಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಅದನ್ನು ಓದಿ ಹೌದು ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ನಿಪಿ 20 ರಂತೆ ಖಾತೆಯಾದ ಬಗ್ಗೆ ನಮ್ಮ ತಾಯಿಯವರಿಗೆ ತಿಳಿದ್ದಿರೂ ಸಹ ಅದನ್ನು ಎಲ್ಲಿಯು ಪ್ರಶ್ನಿಸಿರಲಿಲ್ಲ ಎಂದರೆ

ಅದು ಅವರಿಗೆ ಗೊತ್ತಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.ಎ ಸ್ವತ್ತು 1 ನೇ ಪ್ರತಿವಾದಿಯ ಗಂಡ ನಾಗರಾಜ ಸ್ವಾಮಿ ರವರ ಸ್ವಯಾರ್ಜಿತ

ಸ್ವತ್ತಾಗಿದ್ದು ಅದರಲ್ಲಿ ನಮ್ಮ ತಾಯಿಯವರಿಗೆ ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

ದಾವಾ ಐಟಂ ನಂ. ಬಿ ಸ್ವತ್ತು ಹೇಗೆ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಸದರಿ ದಾವಾ ಸ್ವತ್ತು ಮೂಲತಃ ಕಪ್ಪಸೋಗೆ ಗ್ರಾಮದ ಚಿಕ್ಕನಾಯಕ ಬಿನ್ ಜೋಗನಾಯಕ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಿಃ 04.02.1992 ರಲ್ಲಿ ಪ್ರತಿವಾದಿ 4 ಮತ್ತು 6 ರವರು ಸದರಿ ಸ್ವತ್ತನ್ನು ಜಂಟಿಯಾಗಿ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸಾಕ್ಷಿಯು ಒಟ್ಟು ಕುಟುಂಬದ ಆದಾಯದಿಂದ ಜಂಟಿಯಾಗಿ ಖಾರಿದಿಸಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ರವರು ಖರೀದಿಸಿದ ನಂತರ ಆಸ್ತಿಯು ಅವರ ಹೆಸರಿಗೆ ಎಂ ಆರ್ 125/1991 ರಂತೆ ಜಂಟಿ ಖಾತೆಯಾಗಿರುತ್ತದೆ ಎಂದರೆ ನನ್ನ ತಾಯಿಯವರ ಗಮನಕ್ಕೆ ಬಾರದಂತೆ ಅವರ ಹೆಸರಿಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಿಃ 09.04.2018 ರಂದು ಅವರು ಖರೀದಿಸಿದ ದಾವಾ ಐಟಂ ನಂ. ಬಿ ಸ್ವತ್ತನಲ್ಲಿ ಪ್ರತಿವಾದಿ 6 ಶಿವರಾಜು ರವರಿಗೆ ಇದ್ದ ಹಕ್ಕನ್ನು ಪ್ರತಿವಾದಿ 4 ಪುಟ್ಟಸ್ವಾಮಿ ರವರಿಗೆ ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ನಿವೃತ್ತಿ ಪತ್ರದಂತೆ ಪ್ರತಿವಾದಿ 4 ರವರ ಎಂ ಆರ್ ನಂ. 44/2017-18 ರಂತೆ ಖಾತೆಯಾಗಿರುತ್ತದೆ ಎಂದರೆ ಅದನ್ನು ತಿಳಿಯದ ಹಾಗೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ವಾದ ಪತ್ರದಲ್ಲಿ ಐಟಂ ನಂ. ಬಿ ಸ್ವತ್ತು ಹೇಗೆ ಬಂದಿರುತ್ತದೆ ಮತ್ತು ನಮ್ಮ ಗಮನಕ್ಕೆ ಯಾವತ್ತು ಬಂದಿರುತ್ತದೆ ಎಂದು ತಿಳಿಸಲಾಗಿರುತ್ತದೆ. 4 ನೇ ಪ್ರತಿವಾದಿ ರವರಿಗೆ ಖಾತೆ ಆದ ಬಗ್ಗೆ ನಾವು ಎಲ್ಲಿಯೂ ಪ್ರಶ್ನಿಸಿರುವುದಿಲ್ಲ. ದಾವಾ ಐಟಂ ನಂ. ಬಿ ಸ್ವತ್ತು 4 ಮತ್ತು 4 ಸ್ವಯಾರ್ಜಿತ ಸ್ವತ್ತಾಗಿರುವುದರಿಂದ ನಮ್ಮ ತಾಯಿಯವರಿಗೆ ಅದರಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ